ಕರ್ನಾಟಕ ಅರಣ್ಯ ಇಲಾಖೆ

**ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ – 577401**

**Office of the Deputy Conservator of Forests, Sagar Forest Division, Sagar– 577401**

**Phone No. : 08183 226071** **Email:** Sagardcf@rediffmail.com

ಕ್ರ:ಬಿ1/ಭೂಮಿ/ಎಫ್‌ಸಿ/ಜಿಎಲ್/142337/2021–22 ದಿ: 02–08–2021

ಗೆ,

ಕಾರ್ಯನಿರ್ವಾಹಕ ಅಭಿಯಂತರರು
ಕರ್ನಾಟಕ ನೀರಾವರಿ ನಿಗಮ ನಿಯಮಿತ
ಡಿ.ಆರ್.ಪಿ. ವಿಭಾಗ,
ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

**Proposal No. FP/KA/IRRIG/142337/2021**

ವಿಷಯ:– Diversion of 4.966 Ha of Forest land for Construction of Rising Min, Gravity Feeder and Delivary Chamber in Kotipura and other villages of Shikaripura Taluk of Shivamogga District comes under Sagar Forest Division to fill 41 MI/ZP tanks and providing irrigation for 3430 Ha of command area of Shikaripura and Soraba Taluks by lifting 0.429 TMC of water from Kumudvathi River under Kasaba LIS Project-Reg.

ಉಲ್ಲೇಖ:–
1. ಪರಿವೇಶ್ ತಂತ್ರಾಂಶದಲ್ಲಿ ಸಲ್ಲಿಕೆಯಾದ ಎಫ್.ಸಿ ಪ್ರಸ್ತಾವನೆ ಸಂಖ್ಯೆ: **FP/KA/IRRIG/142337/2021**
2. Executive Engineer, Karnataka Neeravari Nigam Limited, Dandavathi Reservoir Project Division Shikaripura Taluk, Shivamogga District" ಇವರ ಕಛೇರಿ ಪತ್ರ ಸಂಖ್ಯೆ: EE/KNNL/DRP/D/SKP/Kasaba-LIS-FC/2021-22/817 Dated : 13.08.2021
3. ಈ ಕಛೇರಿ ಪತ್ರ ಸಮಸಂಖ್ಯೆ: ಬಿ1/ಭೂಮಿ/ಎಫ್‌ಸಿ/ಜಿಎಲ್/142337/2021–22 ದಿ: 17.08.2021
4. ವಲಯ ಅರಣ್ಯಾಧಿಕಾರಿ, ಅಂಬ್ಲಿಗೊಳ ವಲಯ, ಅಂಬ್ಲಿಗೊಳ ಇವರ ಕಛೇರಿ ಪತ್ರ ಸಂಖ್ಯೆ: ವಅಅ/152/2021–22 ದಿ: 25.08.2021
5. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಶಿಕಾರಿಪುರ ಉಪವಿಭಾಗ, ಶಿಕಾರಿಪುರ ಇವರ ಕಛೇರಿ ಪತ್ರ ಸಂಖ್ಯೆ: ಸ.ಅ.ಸಂ ಶಿ.ಉ/293/2020–21 ದಿ: 31.08.2021

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕಲವತ್ತಿ ಗ್ರಾಮದ ಸ.ನಂ. 75, 54 (0.321ಹೆ), ಹಿರೆಕವಲತ್ತಿ ಗ್ರಾಮದ ಸ.ನಂ. 44, 45(0.387ಹೆ), ಹೊತನಕಟ್ಟೆ ಗ್ರಾಮದ ಸ. ನಂ. 72, 58(1.664ಹೆ), ಕೊಟಿಪುರ ಗ್ರಾಮದ ಸ. ನಂ. 78(0.598ಹೆ), ಮುಡುಬ ಸಿದ್ದಾಪುರ ಗ್ರಾಮದ ಸ. ನಂ. 29(0.058ಹೆ), ಮಲ್ಲಾಪುರ ಗ್ರಾಮದ ಸ. ನಂ. 22, 13, 9(0.802ಹೆ), ಸಾಗರ ತಾಲ್ಲೂಕು, ಕಸಬಾ ಹೋಬಳಿ, ಕೊರ್ಲಿಕೊಪ್ಪ ಗ್ರಾಮದ ಸ. ನಂ. 67(0.345ಹೆ), ಮತ್ತು ಸೊರಬ ತಾಲ್ಲೂಕು, ಉಳವಿ ಹೋಬಳಿ, ಇಂಡಿಹಳ್ಳಿ ಗ್ರಾಮದ ಸ. ನಂ. 272(0.584ಹೆ), ಮಳಲಿಕೊಪ್ಪ ಗ್ರಾಮದ ಸ. ನಂ. 57(0.207ಹೆ) ರಲ್ಲಿರುವ ಅರಣ್ಯ ಪ್ರದೇಶದಲ್ಲಿ Diversion of 4.966 Ha of Forest land for construction of Raising Main, Gravity Feeder and Delivary Chamber in Kotipura and other villages of Shikaripura Taluk of Shivamogga District to fill 41 MI/ZP tanks and providing irrigation for 3430 Ha of command area of Shikaripura and Soraba Taluks by lifting 0.429 TMC of

ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ನೀವು ಉದ್ದೇಶಿಸಿರುತ್ತೀರಿ. ಸದರಿ ಈ ಯೋಜನೆಗೆ ಸಂಬಂಧಿಸಿದಂತೆ ನೀವು ಸಮೀಕ್ಷೆಯನ್ನು ಕೈಗೊಂಡಿದ್ದು, ಸಮೀಕ್ಷೆಯ ಪ್ರಕಾರ ಸಾಗರ ಅರಣ್ಯ ವಿಭಾಗದ ಅಂಬ್ಲಿಗೊಳ ಮತ್ತು ಶಿರಾಳಕೊಪ್ಪ ವಲಯದ ವ್ಯಾಪ್ತಿಯಲ್ಲಿ ಬರುವ 09 ಗ್ರಾಮಗಳಿಂದ ಒಟ್ಟು 4.966 ಹೆಕ್ಟೇರ್ ಅರಣ್ಯ ಪ್ರದೇಶವು ಬಳಕೆಯಾಗಲಿದೆ ಎಂದು ಉಲ್ಲೇಖ (1)ರಲ್ಲಿ ಪರಿವೇಶ್ ತಂತ್ರಾಂಶದಲ್ಲಿ 4.966 ಹೆಕ್ಟರ್ ಅರಣ್ಯ ಭೂಮಿ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತೀರಿ.

ಉಲ್ಲೇಖ (2)ರಲ್ಲಿ ಉಲ್ಲೇಖ (1)ರ ಪ್ರಸ್ತಾವನೆಗೆ ಸಂಬಂಧಿಸಿದಂತೆ ನೀವು ಸಲ್ಲಿಸಿದ ಪ್ರಸ್ತಾವನೆಯ ವಿವರವನ್ನು ಒಳಗೊಂಡ 08 ಸೆಟ್‌ಗಳ ಹಾರ್ಡ್ ಕಾಪಿಯನ್ನು ವಲಯ ಅರಣ್ಯಾಧಿಕಾರಿಗಳು, ಅಂಬ್ಲಿಗೊಳ ವಲಯ ಮತ್ತು ಶಿರಾಳಕೊಪ್ಪ ವಲಯ ಇವರಿಗೆ ಸ್ಥಳ ಪರಿಶೀಲನೆಗಾಗಿ ಉಲ್ಲೇಖ (3)ರಲ್ಲಿ ಕಳುಹಿಸಲಾಗಿರುತ್ತದೆ.

ವಲಯ ಅರಣ್ಯಾಧಿಕಾರಿಗಳು, ಅಂಬ್ಲಿಗೊಳ ವಲಯ, ಅಂಬ್ಲಿಗೊಳ ಇವರು ನಿಮ್ಮ ಸಿಬ್ಬಂದಿಯವರೊಂದಿಗೆ ಪ್ರಸ್ತಾವನೆಯಲ್ಲಿ ನಮೂದಿಸಿದ ಸ್ಥಳಗಳಗೆ ಭೇಟಿ ನೀಡಿ ನೀವು ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ನಕಾಶೆಯಂತೆ ಸ್ಥಳ ಪರಿಶೀಲಿಸಿರುತ್ತಾರೆ, ಸ್ಥಳ ಪರಿಶೀಲನಾ ವರದಿಯಂತೆ ಶಿಕಾರಿಪುರ ತಾಲ್ಲೂಕು, ಕಸಬಾ ಹೋಬಳಿ, ಹೊತನಕಟ್ಟೆ ಗ್ರಾಮದ ಸ. ನಂ. 72 ರಲ್ಲಿ ಇರುವ ಬೆಳ್ಳಂದೂರು ರಾಜ್ಯ ಅರಣ್ಯ ಮತ್ತು ಬನ್ನೂರು ಕಿರು ಅರಣ್ಯ ಪ್ರದೇಶದಲ್ಲಿ ಸದರಿ ಪೈಪ್‌ಲೈನ್‌ನ ಉದ್ದ 766ಮೀ ಎಂದು ನೀವು ಪ್ರಸ್ತಾವನೆಯಲ್ಲಿ ಸಲ್ಲಿಸಿರುತ್ತೀರಿ, ಆದರೆ ಸ್ಥಳದಲ್ಲಿ ಪೈಪ್‌ಲೈನ್‌ನ ಉದ್ದ 817ಮೀ ಇರುವುದಾಗಿ ತಿಳಿಸುತ್ತಾ 51ಮೀ ಉದ್ದ ಹೆಚ್ಚುವರಿಯಾಗಿರುವುದಾಗಿ ವಲಯ ಅರಣ್ಯಾಧಿಕಾರಿಗಳು, ಅಂಬ್ಲಿಗೊಳ ವಲಯ, ಅಂಬ್ಲಿಗೊಳ ಇವರು ಉಲ್ಲೇಖ (4)ರಲ್ಲಿ ಈ ಕಛೇರಿಗೆ ವರದಿ ಸಲ್ಲಿಸಿರುತ್ತಾರೆ. ಆದ್ದರಿಂದ ನೀವು ಅಂಬ್ಲಿಗೊಳ ಮತ್ತು ಶಿರಾಳಕೊಪ್ಪ ವಲಯದ ವಲಯ ಅರಣ್ಯಾಧಿಕಾರಿಯವರೊಡನೆ ಸಮನ್ವಯ ಸಾಧಿಸಿ ಪ್ರಸ್ತಾಪಿತ ಯೋಜನಾ ಪ್ರದೇಶದ ಮರು ಮೋಜಣಿ ನಡೆಸಿ ಪ್ರಸ್ತಾಪಿತ ಯೋಜನೆಯಲ್ಲಿ ನಿಖರವಾಗಿ ಬಳಕೆಯಾಗುವ ಅರಣ್ಯ ಪ್ರದೇಶದ ವಿಸ್ತೀರ್ಣಕ್ಕೆ ಅನ್ವಯಿಸುವಂತೆ ಪರಿಷ್ಕೃತ ಯೋಜನಾ ನಕಾಶೆಗಳನ್ನು (ಟೋಪೊ ಮತ್ತು ಗ್ರಾಮ ನಕಾಶೆ) ಮತ್ತು ಯೋಜನೆಯಲ್ಲಿ ಬಳಕೆಯಾಗುವ ಅರಣ್ಯ ಭೂಮಿಗೆ ಸಮನಾಂತರವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸುವ ಪ್ರದೇಶದ ಪರಿಷ್ಕೃತ ನಕಾಶೆಗಳನ್ನು (ಟೋಪೊ ಮತ್ತು ಗ್ರಾಮ ನಕಾಶೆ) ತಯಾರಿಸಿ ಹಾಗೂ ಪರಿವೇಶ್ ತಂತ್ರಾಂಶದ ಪಾರ್ಟ್–1ರಲ್ಲಿ ಸೂಕ್ತ ತಿದ್ದುಪಡಿ ಮಾಡಿ ಪರಿಷ್ಕೃತ ಪ್ರಸ್ತಾವನೆಯನ್ನು ಪರಿವೇಶ್ ತಂತ್ರಾಂಶದಲ್ಲಿ ಮರು ಸಲ್ಲಿಸಲು ಈ ಮೂಲಕ ಸೂಚಿಸಿದೆ.

ಸಹಿ/–

ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ

**ಪ್ರತಿಯನ್ನು:–**

1. ಗೌರವಗಳೊಂದಿಗೆ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ ಮತ್ತು ನೋಡಲ್ ಅಧಿಕಾರಿಗಳು) ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಗೌರವಗಳೊಂದಿಗೆ ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಶಿವಮೊಗ್ಗ ವೃತ್ತ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಶಿಕಾರಿಪುರ ಉಪ ವಿಭಾಗ, ಶಿಕಾರಿಪುರ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ವಲಯ ಅರಣ್ಯಾಧಿಕಾರಿ ಅಂಬ್ಲಿಗೋಳ ಮತ್ತು ವಲಯ ಅರಣ್ಯಾಧಿಕಾರಿ ಶಿರಾಳಕೊಪ್ಪ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ, ಉಪಯೋಗಿ ಸಂಸ್ಥೆಯ ಸಿಬ್ಬಂದಿಯವರೊಂದಿಗೆ ಸಮನ್ವಯ ಸಾಧಿಸಿ ಸ್ಥಳ ಮೋಜಣಿಗೆ ಸಹಕರಿಸಲು ಕೋರಿದೆ. ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಪ್ರಕಾರ ಸದರಿ ಯೋಜನೆಗೆ ಪೂರ್ವಾನುಮತಿ ದೊರಕುವವರೆಗೆ ಯಾವುದೇ ಕಾಮಗಾರಿಯನ್ನು ಸದರಿ ಪ್ರದೇಶದಲ್ಲಿ ಕೈಗೊಳ್ಳದಂತೆ ನೋಡಿಕೊಳ್ಳಲು ಸೂಚಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ